# ಗಂಗಾದಿ ತೀರ್ಥ ಫಲಂಗಳನೀವುದು

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Note:** Lyrics in the video song is taken from here. The link for your reference is : https://www.youtube.com/watch?v=XVBK8Son6GE. These lyrics matches with the singer (given without highlights).
4. **Note:** The lyrics in Ref.1 above is different. Hence, they are given separately in yellow highlights. The lyrics in Ref. 3 are not considered or mentioned here.
5. **Note:** The Ankita are different in both the references given here. We have considered book in Ref.1 as standard and taken that Ankita for listing.

ರಾಗ: ಮೇಘಮಾಲಾ ತಾಳ: ಛಾಪು

| | |
|---|---|
| ಗಂಗಾದಿ ಸಕಲ ತೀರ್ಥಂಗಳ ಫಲವಿದು | ಗಂಗಾದಿ ತೀರ್ಥ ಫಲಂಗಳನೀವುದು |
| ಹರಿಯ ನಾಮ | ಹರಿಯ ನಾಮ |
| ಹಿಂಗದೆ ಜನರಿಗೆ ಮಂಗಳಕರವಿದು | ಹಿಂಗದೆ ಜನರಿಗೆ ಮಂಗಳವೀವುದು |
| ಹರಿಯ ನಾಮ ॥ ಪ ॥ | ಹರಿಯ ನಾಮ |
| | |
| ವೇದ ಶಾಸ್ತ್ರಗಳ ಓದಲರಿಯದವಗೆ | ವೇದ ಶಾಸ್ತ್ರಂಗಳ ಅರಿಯದ ಜನರಿಗೆ |
| ಹರಿಯ ನಾಮ | ಹರಿಯ ನಾಮ |
| ಆದಿ ಪುರುಷನ ಪೂಜಿಸದವಗೆ | ಜಗದಾದಿ ಪುರುಷನನು ಪೂಜಿಸದವರಿಗೆ |
| ಹರಿಯ ನಾಮ | ಹರಿಯ ನಾಮ |
| ಸಾಧಿಸಬೇಕು ಮೋಕ್ಷವೆಂಬುವರಿಗೆ | ಸಾಧಿಸುವೆವು ಪರವೆಂಬಂಥ ಜನರಿಗೆ |
| ಹರಿಯ ನಾಮ | ಹರಿಯ ನಾಮ |
| ಶೋಧಿಸಿ ಇಟ್ಟ ಚಿನ್ನದ ಗಟ್ಟಿ ಕಾಣಿರೋ | ಶೋಧಿಸಿ ಇಟ್ಟ ಚಿನ್ನದ ಗಟ್ಟಿ ಕಾಣಿರೊ |
| ಹರಿಯ ನಾಮ ॥ ೧ ॥ | ಹರಿಯ ನಾಮ |
| | |
| ಸ್ನಾನ ಸಂಧ್ಯಾವಂದನೆ ಮಾಡದವಗೆ | ಸ್ನಾನ ಜಪಂಗಳ ಸಾಧಿಸದವರಿಗೆ |
| ಹರಿಯ ನಾಮ | ಹರಿಯ ನಾಮ |
| ಜ್ಞಾನವು ಇಲ್ಲದ ಮೂಢಾತ್ಮ ಜನರಿಗೆ | ದಾನ ಧರ್ಮಕೆ ಒದಗದ ಮನುಜರಿಗೆ |

| | |
|---|---|
| ಹರಿಯ ನಾಮ | ಹರಿಯ ನಾಮ |
| ದಾನ ಧರ್ಮಕನುಕೂಲ ಇಲ್ಲದವಗೆ | ಧ್ಯಾನವೊಂದರಿಯದ ಮೂಢಾತ್ಮ ಜನರಿಗೆ |
| ಹರಿಯ ನಾಮ | ಹರಿಯ ನಾಮ |
| ಮಾನುಷ ಜನುಮ ಸಫಲ ಮಾಡುವದೈ | ಮಾನುಷ್ಯ ಜನ್ಮವ ಪಾವನ ಮಾಡುವುದು |
| ಹರಿಯ ನಾಮ     ‖ ೨ ‖ | ಹರಿಯ ನಾಮ |
| | |
| ವ್ಯಾಳ ವ್ಯಾಳಕೆ ಎಚ್ಚರಿಕೆಯ ಕೊಡುವುದು | ವೇಳೆ ವೇಳೆಗೆ ವೆಚ್ಚ ವ್ಯಯಗಳನೀವುದು |
| ಹರಿಯ ನಾಮ | ಹರಿಯ ನಾಮ |
| ಜಾಳಿಗೆ ಹೊನ್ನು ತುಂಬಿಟ್ಟಂತೆ ಕಾಣಿರೋ | ಜಾಳಿಗೆ ಮಾಳಿಗೆ ಮನೆಯ ನೆಚ್ಚದೆ ಪೇಳಿ |
| ಹರಿಯ ನಾಮ | ಹರಿಯ ನಾಮ |
| ಕಾಲನ ದೂತರಿಗಣುಕಿಸದಿಪ್ಪುದು | ಕಾಲನವರು ಬಂದು ಕದಲಲಾಗದ ಮುನ್ನ |
| ಹರಿಯ ನಾಮ | ಹರಿಯ ನಾಮ |
| ಲೋಲ ಶ್ರೀ ಪುರಂದರ ವಿಠಲ ರಾಯನ | ಶ್ರೀಲೋಲ ಪುರಂದರ ವಿಠ್ಠಲನ ಒಲುಮೆಗೆ |
| ದಿವ್ಯ ನಾಮ     ‖ ೩ ‖ | ಹರಿಯ ನಾಮ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ತೀರ್ಥ** = ಪುಣ್ಯ ಜಲ ಸ್ನಾನ

**ಶೋಧಿಸಿ** = ಪುಟಕ್ಕೆ ಹಾಕಿ

**ಜಾಳಿಗೆ** = ಜಾಲಾಂದರ, ಕಿಟಕಿ ಲಂದ

**Classification:** Keerthane
**Ankita:** purandara vittala
**Location:** NA
**Category:** nama mahatme, jeevanoddhara, mukti marga
**Sub-Category:** Krishna, thirtha, gange, snana, japa, mangala, puje, bangara, Dhyana, janma, yama, jana, veda, shastra, mukti, jnana, dharma, dAna, mane,
**Pravachana:** NA
**Explanation:** NA